# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ಮತ್ತು ಅವುಗಳ ವ್ಯಾಪ್ತಿಯ ಇತರೆ ಇಲಾಖೆಯ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ವೆಚ್ಚಕ್ಕಾಗಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಆರ್ಥಿಕ ಇಲಾಖೆ ವೆಚ್ಚ 1, 3 ಮತ್ತು 5 ಶಾಖೆಗಳ ಕಡತ ಸಂಖ್ಯೆ: ಆಇ 67 ವೆಚ್ಚ 1/2018, ಆಇ 79 ವೆಚ್ಚ 3/2017 ಮತ್ತು ಆಇ 143 ವೆಚ್ಚ 5/2017

**ಪ್ರಸ್ತಾವನೆ:**

ಮಂಡ್ಯ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ತೆರವಾದ ಹುದ್ದೆಗಳು ಭರ್ತಿಯಾದ್ದರಿಂದ ವೇತನ ವೆಚ್ಚಕ್ಕಾಗಿ ಲೆಕ್ಕ ಶೀರ್ಷಿಕೆ 2225-00-102-0-35 & 36 ಮತ್ತು 2225-00-101-0-29 & 30 ರಡಿ ಅನುಕ್ರಮವಾಗಿ ರೂ.12.73ಲಕ್ಷ ಮತ್ತು ರೂ.14.30ಲಕ್ಷ ಒಟ್ಟು ರೂ.27.03ಲಕ್ಷ ಅನುದಾನ, ರಾಯಚೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಕಛೇರಿಯು ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸುತ್ತಿದ್ದು ಕಟ್ಟಡದ ಬಾಡಿಗೆ ಬಾಬ್ತು ರೂ.2.26ಲಕ್ಷ ಅನುದಾನವನ್ನು ಲೆಕ್ಕ ಶೀರ್ಷಿಕೆ 2851-00-107-0-29ರಡಿ ಹಾಗೂ ಹಾವೇರಿ ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 2014-15ನೇ ಸಾಲಿನಲ್ಲಿ ಆರೋಗ್ಯ ಸಲಕರಣೆಗಳನ್ನು ಸರಬರಾಜು ಮಾಡಿದ ಬಾಬ್ತು ರೂ.3.16ಲಕ್ಷ ಧನಾದೇಶವನ್ನು ವಿತರಿಸಿದ್ದು ಸದರಿ ಧನಾದೇಶವು ನಗದೀಕರಿಸ ಕಾರಣ, ಮಹಾಲೇಖಪಾಲರ ಧನ ಮತ್ತು ಋಣ ಜ್ಞಾಪನ ಮತ್ತು ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರು ಕಾಲ ವಿಳಂಬ ವಿನಾಯಿತಿ ನೀಡಿರುವ ಹಿನ್ನೆಲೆಯಲ್ಲಿ ರೂ.3.16ಲಕ್ಷ ಅನುದಾನವನ್ನು ಲೆಕ್ಕ ಶೀರ್ಷಿಕೆ 2210-00-104-0-61-221ರಡಿ ಒಟ್ಟಾರೆ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ರೂ.29.29ಲಕ್ಷ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಡಿ ರೂ.3.16ಲಕ್ಷ ಒಟ್ಟು ರೂ.32.45ಲಕ್ಷ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸುವಂತೆ ಕೋರಿದ್ದು, ಕೋರಿರುವ ಹೆಚ್ಚುವರಿ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-00-196-1-05-300 ಅಡಿ ರೂ.29.29ಲಕ್ಷ ಹಾಗೂ ಲೆಕ್ಕ ಶೀರ್ಷಿಕೆ 2515-00-197-1-10-300ರಡಿ ರೂ.3.16ಲಕ್ಷಗಳನ್ನು ಬಿಡುಗಡೆಗೊಳಿಸಲು ನಿರ್ಣಯಿಸಲಾಗಿದೆ. ಅದರನ್ವಯ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 136 ವೆಚ್ಚ 6/2018 ದಿನಾಂಕ:23ನೇ ಫೆಬ್ರವರಿ 2018

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ ಅನುಬಂಧದ ಕಾಲಂ 2 ಜಿಲ್ಲಾ ಪಂಚಾಯತ್‌ಗಳಿಗೆ ಕಾಲಂ 3 ಕಾರ್ಯಕ್ರಮದಡಿಯಲ್ಲಿ ಕಾಲಂ 4ರನ್ವಯ 2515-00-196-1-05-300 ಅಡಿ ಕಾಲಂ 5ರನ್ವಯ ಲೆಕ್ಕ ಶೀರ್ಷಿಕೆ 2515-00-197-1-10-300 ಅಡಿ ಕಾಲಂ 6ರಂತೆ ಒಟ್ಟು ಅನುದಾನ ರೂ.32.45ಲಕ್ಷ (ರೂಪಾಯಿ ಮೂವತ್ತೆರಡು ಲಕ್ಷದ ನಲವತ್ತೈದು ಸಾವಿರಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಲಾಗಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1)ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿದ ನಿರ್ದೇಶನದಂತೆ ಕ್ರಮವಹಿಸಿ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು.

(ರೂ.ಲಕ್ಷಗಳಲ್ಲಿ)

| ಆರ್ಥಿಕ ಇಲಾಖೆ/ಆಡಳಿತ ಇಲಾಖೆಯ ಕಡತ ಸಂಖ್ಯೆ | ಜಿಲ್ಲಾ/ತಾಲ್ಲೂಕು ಪಂಚಾಯತ್ | ಕಾರ್ಯಕ್ರಮದ ಲೆಕ್ಕಶೀರ್ಷಿಕೆ ಮತ್ತು ಆಬ್ಜೆಕ್ಟ್ ಹೆಡ್ – ಹಾಗೂ ಬಿಡುಗಡೆಗೊಳಿಸಿದ ಲೆಕ್ಕ ಶೀರ್ಷಿಕೆ | | | |
|---|---|---|---|---|---|
| | | ಲೆಕ್ಕ ಶೀರ್ಷಿಕೆ | 2515-00-196-1-05-300 | 2515-00-197-1-10-300 | ಒಟ್ಟು |
| 1 | 2 | 3 | 4 | 5 | 6 |
| ಆಇ 67 ವೆಚ್ಚ 1/2018 | ರಾಯಚೂರು | 2851-00-107-0-29-050 | 2.26 | | 2.26 |
| ಆಇ 79 ವೆಚ್ಚ 3/2018 | ಮಂಡ್ಯ | 2225-00-102-0-35-001<br>2225-00-102-0-36-001 | 3.92<br>8.81 | | 12.73 |
| | ಉತ್ತರ ಕನ್ನಡ | 2225-00-101-0-30-001<br>2225-00-101-0-29-001 | 9.50<br>4.80 | | 14.30 |
| ಆಇ 143 ವೆಚ್ಚ 5/2018 | ಹಾವೇರಿ | 2210-00-104-0-64-221 | | 3.16 | 3.16 |
| | ಒಟ್ಟು | | **29.29** | **3.16** | **32.45** |

(ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು/ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ-2ಕ್ಕೆ ಜಮೆ ಮಾಡಿಕೊಂಡು ನಂತರ ಮರು ಹೊಂದಾಣಿಕೆ ಆದೇಶವನ್ನು ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರುರವರಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಸಲ್ಲಿಸಿ ಖಜಾನೆಯಲ್ಲಿ ಅಪ್‌ಲೋಡ್ ಮಾಡಿಕೊಳ್ಳುವುದು)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ),
ಆರ್ಥಿಕ ಇಲಾಖೆ

1. ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಕೃಷಿ/ರೇಷ್ಮೆ ಇಲಾಖೆ
3. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
4. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಸಂಬಂಧಪಟ್ಟ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು
6. ಸಂಬಂಧಪಟ್ಟ ಜಿಲ್ಲಾ/ಉಪ ಖಜಾನೆ ಅಧಿಕಾರಿಗಳು
7. ರಕ್ಷಾ ಕಡತಕ್ಕೆ
8. ಹೆಚ್ಚುವರಿ ಪ್ರತಿ